


# ದಕ್ಷಿಣ ಅಮೆರಿಕಾದಲ್ಲಿ ವೇದಾಂತ ಭಾವಧಾರೆ

ಸ್ವಾಮಿ ಆತ್ಮಜ್ಞಾನಂದ

## ಭಾಗ ೨

''**ದೂ**ರದ ದೇಶದಲ್ಲಿ ಸ್ವಾಮಿ ವಿಜಯಾನಂದರು ಕಂಡ ಯಶಸ್ಸಿನ ಬಗ್ಗೆ 'ಪ್ರಬುದ್ಧ ಭಾರತ' ಪತ್ರಿಕೆಯಲ್ಲಿ ಹಲವು ವರದಿಗಳು ಪ್ರಕಟಗೊಂಡಿವೆ. ದಕ್ಷಿಣ ಅಮೆರಿಕಾದಲ್ಲಿ ಅವರು ಶ್ರೀರಾಮಕೃಷ್ಣರ ವಿಶ್ವಭಾವೈಕ್ಯ ವಿಚಾರಧಾರೆಯ ಹಾಗೂ ವೇದಾಂತದ ಭಾವನೆಗಳನ್ನು ಹರಡುವಲ್ಲಿ ಮಾಡಿದ ಪ್ರಭಾವಶಾಲಿ ಕಾರ್ಯ, ಆಧ್ಯಾತ್ಮಿಕ ವಿಷಯಗಳನ್ನು ಕುರಿತಂತೆ ಅವರಿಗಿದ್ದ ಪ್ರಭುತ್ವ, ಅವರ ಆದರ್ಶಪ್ರಾಯ ಜೀವನ, ಅಸಾಧಾರಣ ಹಾಗೂ ಪ್ರಸನ್ನ ವ್ಯಕ್ತಿತ್ವ–ಇವುಗಳಿಂದ ಅವರು ಜನರ ಮೇಲೆ ಅಗಾಧ ಪ್ರಭಾವವನ್ನು ಬೀರಿದರು. ಹೀಗೆ ಅವರು ಜನಪ್ರಿಯರಾದರು. ಅವರು ರೇಡಿಯೋದಲ್ಲಿ ಸ್ಫೂರ್ತಿದಾಯಕ ಪ್ರವಚನಗಳನ್ನು ನೀಡುತ್ತಿದ್ದರು. ಸ್ಪಾನಿಷ್ ಭಾಷೆಯಲ್ಲಿ ಸಾರ್ವಜನಿಕ ಭಾಷಣಗಳನ್ನು ಮಾಡುತ್ತಿದ್ದರು. ಅವುಗಳು ಅಪಾರ ಜನಮನ್ನಣೆಯನ್ನು ಗಳಿಸಿದವು. ಚಿಲಿ, ಕೊಲಂಬಿಯಾ, ಗ್ವಾಟೆಮಾಲಾ, ಪೆರು ಹಾಗೂ ಬ್ರೆಝಿಲ್ ದೇಶಗಳಲ್ಲಿ ವ್ಯಾಪಕವಾಗಿ ಪ್ರವಾಸ ಮಾಡುತ್ತಾ, ಅನೇಕರಿಗೆ ಮಂತ್ರದೀಕ್ಷೆ ನೀಡುತ್ತ ಅವರು ಜನರಿಗೆ ಪ್ರೇರಣೆ ನೀಡುತ್ತಿದ್ದರು. ಅವರಿಂದ ದೀಕ್ಷೆ ಪಡೆದ ಭಕ್ತರು ಈಗ ತುಂಬ ವೃದ್ಧರು; ಆದರೂ ಅವರು ಇಂದಿಗೂ ಕೂಡ ರಾಮಕೃಷ್ಣ ಭಾವಧಾರೆಗೆ ನಿರಂತರ ಬೆಂಬಲ ನೀಡುತ್ತ ಬಂದಿದ್ದಾರೆ. ೧೯೭೩ರ ಸೆಪ್ಟೆಂಬರ್ ೧ ರಂದು ಸ್ವಾಮಿ ವಿಜಯಾನಂದರು ಬೆಲ್ಲಾ ವಿಸ್ಟಾದಲ್ಲಿ ತೀರಿಕೊಂಡರು.''

*(ಸ್ವಾಮಿ ಪರೇಶಾನಂದ, 'The Vedanta Movemement in Argentina', PB, ಜನವರಿ ೧೯೯೧, ಪು. ೪೬-೫೨)*

ಬಳಿಕ ಬಂದ ಸ್ವಾಮಿ ಪರಾತ್ಪರಾನಂದರು ಸ್ವಾಮಿ ವಿಜಯಾನಂದರ ಕಾರ್ಯವನ್ನು ತುಂಬು ಉತ್ಸಾಹದಿಂದ ಮುಂದುವರಿಸಿದರು. ಕಾರಣಾಂತರಗಳಿಂದ ಕೆಲವು ವರ್ಷಗಳ ನಂತರ ಅವರು ಭಾರತಕ್ಕೆ ಮರಳಬೇಕಾಯಿತು. ಈ ಕಾರಣದಿಂದ ಅಲ್ಲಿನ ಚಟುವಟಿಕೆಯಲ್ಲಿ ಅಂತರವುಂಟಾಯಿತು. ಬೇಲೂರು ಮಠವು ಅರ್ಜೆಂಟೀನಾಗೆ ಸ್ವಾಮಿ ಪರೇಶಾನಂದರನ್ನು ಕಳುಹಿಸಿತು. ಅಲ್ಲಿ ಅವರು ಚೆನ್ನಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ನಿರರ್ಗಳವಾಗಿ ಸ್ಪಾನಿಷ್ ಭಾಷೆಯನ್ನು ಮಾತನಾಡಬಲ್ಲ ಅವರ ಮೇಲೆ ಅರ್ಜೆಂಟೀನಾ, ಬ್ರೆಜಿಲ್ ಹಾಗೂ ದಕ್ಷಿಣ ಅಮೆರಿಕಾದ ಇತರ ದೇಶಗಳ ಭಕ್ತರಿಗೆ ಅಪಾರ ಗೌರವವಿದೆ.

ಸ್ವಾಮಿ ವಿಜಯಾನಂದರು ಬ್ರೆಝಿಲ್‌ಗೆ ನೀಡಿದ ಭೇಟಿಯಿಂದಾಗಿ ಪ್ರಮುಖ ನಗರಗಳಾದ ರಿಯೋ ಡಿ ಜನೇರೋ ಹಾಗೂ ಸಾವೊ ಪೌಲೋಗಳಲ್ಲಿ ಭಕ್ತರ ಬಳಗಗಳು ಹೆಚ್ಚು ಬೆಳವಣಿಗೆ ಹೊಂದಿದವು. ಬೇಲೂರು ಮಠದಿಂದ ನಿಷ್ಠಾವಂತ ಸಂನ್ಯಾಸಿ ಸ್ವಾಮಿ ನಿರ್ಮಲಾತ್ಮಾನಂದರು ಬಂದ ಮೇಲೆ ಸಾವೊ ಪೌಲೋ ಕೇಂದ್ರವು ೧೯೯೯ರಲ್ಲಿ ರಾಮಕೃಷ್ಣ ಮಹಾಸಂಘಕ್ಕೆ ಸೇರ್ಪಡೆಗೊಂಡಿತು. ಈ ಕೇಂದ್ರವು ಬ್ರೆಝಿಲ್‌ನಲ್ಲಿ ರಾಮಕೃಷ್ಣ ಮಹಾಸಂಘದ ಪ್ರಧಾನ ಕೇಂದ್ರವಾಗಿ ಮಾರ್ಪಟ್ಟಿತು. ರಿಯೊ ಡಿ ಜನೇರೋ, ಕ್ಯುರಿಟಿಬಾ ನಗರಗಳಲ್ಲಿದ್ದ ಭಕ್ತರ ಬಳಗಗಳು ಸಾವೋ ಪೌಲೋ ಕೇಂದ್ರದಿಂದ ಹಾಗೂ ಅಲ್ಲಿಗೆ ಭೇಟಿ ನೀಡುತ್ತಿದ್ದ ಸ್ವಾಮಿಗಳಿಂದ ಪೋಷಣೆ ಪಡೆದವು. ಈ ಬಳಗಗಳು ನಿಯತವಾಗಿ ಒಟ್ಟು ಸೇರುತ್ತಿದ್ದು, ಆರತಿ, ರಾಮಕೃಷ್ಣ ಮಹಾಸಂಘದ ಪ್ರಕಟಣೆಗಳ ಓದು, ಆಧ್ಯಾತ್ಮಿಕ ವಿಷಯಗಳ ಬಗ್ಗೆ ಚರ್ಚೆ ಇತ್ಯಾದಿಗಳನ್ನು ನಡೆಸುತ್ತಿದ್ದವು. ಸ್ವಾಮಿ ನಿರ್ಮಲಾತ್ಮಾನಂದರ ಪ್ರಯತ್ನದಿಂದಾಗಿ ೨೦೦೬ರಲ್ಲಿ ಬೆಲೋ ಹೊರಿಝೊಂಟೆ, ಕ್ಯುರಿಟಿಬಾ ಹಾಗೂ ರಿಯೋ ಡಿ ಜನೇರೋಗಳಲ್ಲಿನ ವೇದಾಂತ ಸಂಘಗಳನ್ನು ಸಾವೊ ಪೌಲೋ ಆಶ್ರಮದ ಉಪ-ಕೇಂದ್ರಗಳಾಗಿ ರಾಮಕೃಷ್ಣ ಮಹಾಸಂಘವು ಗುರುತಿಸುವಂತಾಯಿತು.

ಸಾವೊ ಪೌಲೋ ಆಶ್ರಮಕ್ಕೆ ಸೇರಿದ ಒಂದು ತಪಸ್ಯ ಕೇಂದ್ರವು ನಗರದಿಂದ ೫೦ ಕಿ.ಮೀ. ದೂರದ 'ಎಂಬು ಗೌಚು' ಎಂಬಲ್ಲಿದೆ. ಇಲ್ಲಿ ಪ್ರಾಕೃತಿಕ ರಮಣೀಯತೆಯಿಂದ ತುಂಬಿದ, ತೋಟ ಇತ್ಯಾದಿಗಳಿಂದ ಕೂಡಿದ ಪರಿಸರವಿದೆ. ಇಲ್ಲಿ ಭಕ್ತರಿಗಾಗಿ ಆಧ್ಯಾತ್ಮಿಕ ಶಿಬಿರಗಳು ನಿಯತವಾಗಿ ನಡೆಯುತ್ತವೆ. ಪ್ರವಾಸೀ ಸಂನ್ಯಾಸಿಗಳಾಗಿ ಬಂದ ಸ್ವಾಮಿ ಋತಜಾನಂದ (ಫ್ರಾನ್ಸ್ ಕೇಂದ್ರದಿಂದ) ಸ್ವಾಮಿ ಭಾಸ್ಕರಾನಂದ (ಸಿಯಾಟಲ್ ಕೇಂದ್ರ), ಸ್ವಾಮಿ ಸ್ಮರಣಾನಂದ (ಆಗ ರಾಮಕೃಷ್ಣ ಮಹಾಸಂಘದ ಪ್ರಧಾನ ಕಾರ್ಯದರ್ಶಿಗಳಾಗಿದ್ದರು) ಸ್ವಾಮಿ ಪ್ರಮೇಯಾನಂದ, ಸ್ವಾಮಿ

ಚೇತನಾನಂದ, ಸ್ವಾಮಿ ಆತ್ಮಜ್ಞಾನಾನಂದ, ಸ್ವಾಮಿ ಇಷ್ಟಾನಂದ, ಅಮೆರಿಕಾದ ಸಂತ ಬಾರ್ಬರಾ ಕೇಂದ್ರದ ಸಂನ್ಯಾಸಿನಿಯರ ಭೇಟಿಯಿಂದ ಈ ಪ್ರದೇಶವು ಧನ್ಯವಾಗಿದೆ. ಸ್ವಾಮಿ ವಿಜಯಾ ನಂದರು ಮಾಡಿದಂತೆಯೇ, ಸ್ವಾಮಿ ಪರೇಶಾನಂದರು ಹಾಗೂ ಸ್ವಾಮಿ ನಿರ್ಮಲಾತ್ಮಾನಂದರು ದಕ್ಷಿಣ ಅಮೆರಿಕಾದ ದೇಶಗಳ ಲ್ಲೆಲ್ಲ ವ್ಯಾಪಕವಾಗಿ ಪ್ರವಾಸಮಾಡಿ, ಎಲ್ಲ ವೇದಾಂತ ಸಂಘ ಗಳನ್ನು ಒಂದೆಡೆ ಸೇರಿಸಿ ಅಲ್ಲೆಲ್ಲ ವೇದಾಂತ ಭಾವಧಾರೆಯ ಮುನ್ನಡೆಗೆ ಮಾರ್ಗದರ್ಶನ ಮಾಡಿದ್ದಾರೆ. ಇದರ ಪರಿಣಾಮ ವಾಗಿ, ಇಲ್ಲಿನ ಅನೇಕ ದೇಶಗಳಲ್ಲಿ ಹಲವಾರು ವೇದಾಂತ ಸಂಘಗಳಿವೆ; ಆದರೆ ಇನ್ನೂ ಅವುಗಳು ವೇದಾಂತ ಕೇಂದ್ರಗಳಾಗಿ ರೂಪುಗೊಳ್ಳಬೇಕಾಗಿವೆ.

೧೯೮೦ರಲ್ಲಿ ಕ್ಯುರಿಟಿಬಾ ಕೇಂದ್ರವು ಆರಂಭವಾಯಿತು. ಸ್ವಾಮಿ ವಿಜಯಾನಂದರ ಶಿಷ್ಯರಾಗಿದ್ದ ಜಂದಿರ್ ಕಾರ್ಲೋಸ್ ವೆಲ್ನೆರ್ ಎಂಬ ಭಕ್ತರೊಬ್ಬರ ಮನೆಯಲ್ಲಿ ಇದು ಆರಂಭ ಗೊಂಡಿತು. ೧೯೯೧ರಲ್ಲಿ ಇದು ಒಂದು ಧಾರ್ಮಿಕ ಸೊಸೈಟಿ ಎಂಬುದಾಗಿ ನೋಂದಾಯಿಸಲ್ಪಟ್ಟಿತು; ಹಾಗೂ ೨೦೦೬ರಲ್ಲಿ ಸಾವೊ ಪೌಲೋ ಕೇಂದ್ರದ ಉಪ-ಕೇಂದ್ರವಾಗಿ ಪರಿಗಣಿಸ ಲ್ಪಟ್ಟಿತು. ೨೦೨೦ರಲ್ಲಿ ಇದನ್ನು ಪ್ರತ್ಯೇಕ ಕೇಂದ್ರವನ್ನಾಗಿ ಮಾಡಿ, ಬೇಲೂರು ಮಠವು ಸ್ವಾಮಿ ಪ್ರಜ್ಞಾತ್ಮಾನಂದರನ್ನು ಇದರ ಅಧ್ಯಕ್ಷ ರನ್ನಾಗಿ ನಿಯೋಜಿಸಿತು. ೨೦೨೦ರ ಫೆಬ್ರವರಿಯಲ್ಲಿ ಅವರು ಬ್ರೆಜಿಲ್‌ಗೆ ಬಂದು, ಮಾರ್ಚ್ ತಿಂಗಳಲ್ಲಿ ಕ್ಯುರಿಟಿಬಾ ತಲುಪಿ ದರು. ಕೇಂದ್ರದ ಚಟುವಟಿಕೆಗಳನ್ನು ಯಶಸ್ವಿಯಾಗಿ ನಿರ್ವ ಹಿಸುತ್ತಿರುವ ಅವರು ಪ್ರವಚನ, ಭಜನೆ ಹಾಗೂ ಭಕ್ತರೊಂದಿಗೆ ಸಮಾಲೋಚನೆ ಮುಂತಾದ ಕಾರ್ಯಕ್ರಮಗಳನ್ನು ನಡೆಸು ತ್ತಿದ್ದಾರೆ. ಬ್ರೆಜಿಲ್ ದೇಶದ ಆದರ್ಶ ನಗರವೆಂದೇ ಪರಿಗಣಿಸ ಲ್ಪಟ್ಟಿರುವ ಕ್ಯುರಿಟಿಬಾ ನಗರವು ಸ್ವಚ್ಛತೆ ಹಾಗೂ ಆಧುನಿಕ ಸವ ಲತ್ತುಗಳಿಗಾಗಿ ಹೆಸರುವಾಸಿಯಾಗಿದೆ. ಆಶ್ರಮ ಕೂಡಾ ವಿಶಾಲ ವಾದ ಕಟ್ಟಡವನ್ನು ಹೊಂದಿದೆ; ಅಲ್ಲಿ ಅಗತ್ಯವಾದ ಎಲ್ಲ ಅನು ಕೂಲತೆಗಳೂ ಇವೆ. ಸುಂದರವಾದ ಹೂದೋಟ ಕೂಡ ಅಲ್ಲಿದೆ. ಇದು ಪರ್ವತ ಪ್ರದೇಶವಾದ್ದರಿಂದ ಅನೇಕ ಮಂದಿ ಪ್ರವಾಸಿಗ ರನ್ನು ಆಕರ್ಷಿಸುತ್ತಿದೆ; ಜನಪ್ರಿಯವಾದ ಗಿರಿನಿವಾಸವೂ ಆಗಿದೆ.

ಬಹಳ ಜನಪ್ರಿಯ ಪ್ರವಾಸೀ ಕೇಂದ್ರವಾದ ರಿಯೋ ಡಿ ಜನೇರೋ ನಗರವು ಅಲ್ಲಿರುವ ಬೆಟ್ಟದ ತುದಿಯ 'ಕ್ರೈಸ್ಟ್ ದಿ ರೆಡೀಮರ್'(ಪತಿತೋದ್ಧಾರಕ ಕ್ರೈಸ್ತ) ಎಂಬ ಪ್ರತಿಮೆಯಿಂದಲೂ, ಸುಂದರವಾದ ಸಮುದ್ರತೀರ, ಅರಣ್ಯ-ಪರ್ವತಗಳಿಂದಲೂ ರಮಣೀಯವಾಗಿದೆ. ೧೯೬೦ರ ವರೆಗೂ ಅದು ಬ್ರೆಝಿಲ್ ದೇಶದ ರಾಜಧಾನಿಯಾಗಿತ್ತು. ಈ ಕಣ್ಣುಸೆಳೆಯುವ ನಗರದಲ್ಲಿ ಪ್ರವಾಸೋದ್ಯಮ ಮತ್ತು ಆತಿಥ್ಯ-ಉಪಚಾರ ಇವು ಪ್ರಧಾನ ಚಟುವಟಿಕೆಗಳು. ಸ್ವಾಮಿ ವಿಜಯಾನಂದರ ಶಿಷ್ಯಂದಿರ ಒಂದು ಸಣ್ಣ ಬಳಗ ಇಲ್ಲಿನ ಕೇಂದ್ರವನ್ನು ಆರಂಭಿಸಿತು. ಅಷ್ಟರಲ್ಲಿ ಬ್ರೆಝಿಲ್ ದೇಶದ ರಾಜಧಾನಿಯನ್ನು ಬ್ರೆಸಿಲಿಯಾ ನಗರಕ್ಕೆ ವರ್ಗಾವಣೆ ಮಾಡಲಾಯಿತು. ೨೦೨೧ರಲ್ಲಿ ರಿಯೋದಲ್ಲಿನ ಕೇಂದ್ರವನ್ನು ಪ್ರತ್ಯೇಕ ಕೇಂದ್ರವನ್ನಾಗಿ ಪರಿಗಣಿಸಲಾಯಿತು. ಪ್ರಸ್ತುತ ಲೇಖಕರನ್ನು ಇದರ ಅಧ್ಯಕ್ಷರನ್ನಾಗಿ ಬೇಲೂರು ಮಠವು ನಿಯೋಜಿಸಿತು. ೨೦೨೧ರ ನವೆಂಬರ್‌ನಲ್ಲಿ ಅವರು ಬ್ರೆಜಿಲ್‌ಗೆ ಬಂದು, ೨೦೨೨ರ ಜನವರಿ ೧ ರಂದು ಕೇಂದ್ರದ ಅಧಿಕಾರವನ್ನು ವಹಿಸಿಕೊಂಡರು. ಕೇಂದ್ರದಲ್ಲಿ ಎಲ್ಲ ಚಟುವಟಿಕೆಗಳು ಆರಂಭ ಗೊಂಡವು. ಇಲ್ಲಿನ 'ಗ್ರುಪೋ ಗದಾಯ್' ಎಂಬ ಭಕ್ತರೇ ನಡೆ ಸುವ ಸೊಗಸಾದ ಸಂಗೀತ ಬಳಗವು ಎಲ್ಲ ಕಾರ್ಯಕ್ರಮಗಳನ್ನೂ ಅತ್ಯಂತ ಜೀವಂತವಾಗಿ ನಿರ್ವಹಿಸುತ್ತಿದೆ. ವೇದ ಮಂತ್ರಗಳು, ಭಜನೆ, ಸಂಗೀತ, ಇವುಗಳೊಂದಿಗೆ ಇಂಗ್ಲಿಷ್, ಬಂಗಾಳಿ, ಹಿಂದಿ, ಸಂಸ್ಕೃತ ಹಾಗೂ ಪೋರ್ಚುಗೀಸ್ ಭಾಷೆಯ ಹಾಡುಗಳು ಈ ಬಳಗದ ಕಾರ್ಯಕ್ರಮಗಳಲ್ಲಿ ಸೇರಿರುತ್ತವೆ. ಭಕ್ತಿಭರಿತವಾಗಿ ಹಾಡುವ ಅವರು ಆಧ್ಯಾತ್ಮಿಕ ವಾತಾವರಣವನ್ನು ನಿರ್ಮಿಸು ತ್ತಾರೆ; ಎಲ್ಲರ ಮೆಚ್ಚುಗೆಗೆ ಅದು ಪಾತ್ರವಾಗಿದೆ. ಅನೇಕ ಮಂದಿ ಯುವಕಯುವತಿಯರು ಇಲ್ಲಿನ ಕಾರ್ಯಕ್ರಮಗಳಲ್ಲಿ ಭಾಗ ವಹಿಸುತ್ತಾರೆ, ಹಾಗೂ ವೇದಾಂತದ ವಿಷಯವನ್ನು ತಿಳಿದು ಕೊಳ್ಳಲು ಉತ್ಸುಕರಾಗಿದ್ದಾರೆ – ಇದೇ ಈ ಕೇಂದ್ರದ ವಿಶೇಷತೆ.

ಬೆಲೋ ಹೊರಿಜಾಂಟೆ ನಗರವು ಬ್ರೆಜಿಲ್ ದೇಶದ ಮೂರ ನೇ ಅತಿ ದೊಡ್ಡ ನಗರ. ಅನೇಕ ಕೈಗಾರಿಕೆ ಹಾಗೂ ಗುಡಿ ಕೈಗಾ ರಿಕೆಗಳು ಇಲ್ಲಿವೆ. ಈ ರಾಜ್ಯವನ್ನು 'ಮಿನಾಸ್ ಗೆರಾಯಿಸ್' ಎಂದು ಕರೆಯುತ್ತಾರೆ. ಇದರರ್ಥ – ಖನಿಜ, ಲೋಹ ಹಾಗೂ ಅಮೂಲ್ಯ ರತ್ನಗಳ ಪ್ರದೇಶ ಎಂದು. ೨೦೦೦ನೇ ಇಸವಿಯಲ್ಲಿ ಇಲ್ಲೊಂದು ಕೇಂದ್ರವು ಆರಂಭವಾಯಿತು. ಬ್ರೆಝಿಲ್‌ನಲ್ಲಿರುವ ಕೇಂದ್ರಗಳಲ್ಲೆಲ್ಲ ಅತ್ಯುತ್ತಮ ಕಟ್ಟಡ, ಪರಿಸರವಿರುವುದು ಇಲ್ಲೇ. ವಿಶಾಲವಾದ ಎರಡು ಸ್ಥಳಗಳಲ್ಲಿ ಇಲ್ಲಿನ ಆಧ್ಯಾತ್ಮಿಕ ಹಾಗೂ ಸೇವಾಕಾರ್ಯಗಳು ನಡೆಯುತ್ತಿವೆ. ನಿಷ್ಠಾವಂತ ಭಕ್ತರ ಬಳಗ ವೂ ಇಲ್ಲಿದೆ. ಈ ಸ್ಥಳದಲ್ಲಿ ಇನ್ನೂ ಒಂದು ವಿಶೇಷತೆಯಿದೆ. ೧೯೫೦ರ ಸುಮಾರಿಗೆ ಅರ್ಲಿಂದೋ ಕೊರಿ ಡ ಸಿಲ್ವ ಎಂಬ ಒಬ್ಬ ಪತ್ರಕರ್ತನಿಗೆ ಸ್ವಾಮಿ ಬ್ರಹ್ಮಾನಂದರ ದರ್ಶನ ಅನೇಕ ಬಾರಿ ಉಂಟಾಗಿತ್ತು. ಬಡ ಮಕ್ಕಳಿಗಾಗಿ ಏನನ್ನಾದರೂ ಮಾಡುವಂತೆ ಸ್ವಾಮಿ ಬ್ರಹ್ಮಾನಂದಜಿ ಅವನಿಗೆ ಮಾರ್ಗದರ್ಶನ ಮಾಡಿದರು. ಈ ದರ್ಶನದಿಂದ ಸ್ಫೂರ್ತಿ ಪಡೆದ ಅವನು ಬಡ ಮಕ್ಕಳಿಗೆ ಶಿಕ್ಷಣ ನೀಡಲು ಆರಂಭಿಸಿದ. ಬೇಗನೆ ಅದೊಂದು ಸಂಸ್ಥೆಯ ರೂಪ ಪಡೆಯಿತು – 'Instituto Ramacrisna' ಎಂದು ಅದರ ಹೆಸರು. ೧೯೫೯ರಲ್ಲಿ ಅದು ಸಮಾಜ ಸೇವಾಸಂಸ್ಥೆಯೆಂದು ನೋಂದಾಯಿಸಲ್ಪಟ್ಟಿತು. ಇಲ್ಲಿ ಸಾವಿರಾರು ಮಂದಿ ಮಕ್ಕಳು ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ, ವಿವಿಧ ಪ್ರದೇಶಗಳಲ್ಲಿ ಇದರ ಚಟುವಟಿಕೆ ನಡೆಯುತ್ತಿದೆ. ಇದರಿಂದಾಗಿ ಅವರು ಉತ್ತಮ ಜೀವನ ನಡೆಸುವಂತಾಗಿದೆ. ವೃತ್ತಿ ತರಬೇತಿ, ಸಂಗೀತ, ಕಂಪ್ಯೂ

ಟರ್ ಶಿಕ್ಷಣ ಹಾಗೂ ಇನ್ನಿತರ ಜೀವನ ಮಾರ್ಗಗಳನ್ನು ಇಲ್ಲಿ ಉಚಿತವಾಗಿ ಕಲಿಸಲಾಗುತ್ತಿದೆ. ಹಲವು ಸಂಸ್ಥೆಗಳು, ಉದ್ದಿಮೆಗಳು ಇದಕ್ಕೆ ಧನಸಹಾಯ ನೀಡುತ್ತಿವೆ. ಮಕ್ಕಳಿಗೆ ಉಚಿತವಾಗಿ ಪೌಷ್ಟಿಕ ಆಹಾರವನ್ನೂ ಇಲ್ಲಿ ನೀಡಲಾಗುತ್ತಿದೆ. ಈ ಪ್ರದೇಶದಲ್ಲಿ ಈ ಸೇವಾಸಂಸ್ಥೆ ಗಮನಾರ್ಹವಾದ ಪರಿವರ್ತನೆಯನ್ನೇ ಉಂಟುಮಾಡಿದೆ. ಅನೇಕ ಮಂದಿ ಸಂದರ್ಶಕರನ್ನೂ ಇದು ಆಕರ್ಷಿಸುತ್ತಿದೆ.

ಬ್ರೆಜಿಲ್‌ನ ರಾಜಧಾನಿಯಾದ ಬ್ರೆಸಿಲಿಯಾದಲ್ಲಿರುವ 'Centro Ramakrishna Vedanta' ಎಂಬುದು ವೇಗವಾಗಿ ಬೆಳೆಯುತ್ತಿರುವ ಬಳಗವಾಗಿದೆ. ೨೦೧೧ರಲ್ಲಿ ಭಕ್ತರ ಬಳಗ ಇದನ್ನು ಆರಂಭಿಸಿತು. ಮುಂದೆ ಇದೊಂದು ಉತ್ತಮ ಕೇಂದ್ರವಾಗುವ ಎಲ್ಲ ಸಾಧ್ಯತೆಗಳಿವೆ. ಸಂನ್ಯಾಸಿಗಳು ಇಲ್ಲಿ ನಿಯತವಾಗಿ ಸಭೆ, ಪ್ರವಚನಗಳನ್ನು ನಡೆಸುತ್ತಾರೆ. ಸದ್ಯಕ್ಕೆ ಇದು ಸ್ವತಂತ್ರ ಕೇಂದ್ರವಾಗಿದ್ದು, ರಾಮಕೃಷ್ಣ ಮಹಾಸಂಘದ ಅಧಿಕೃತ ಕೇಂದ್ರವಾಗಿ ಅಥವಾ ಉಪ-ಕೇಂದ್ರವಾಗಿ ಅಂಗೀಕೃತವಾಗುವ ದಿನಗಳನ್ನು ನಿರೀಕ್ಷಿಸುತ್ತಿದೆ. ಇಲ್ಲಿನ ಕಾರ್ಯಕ್ರಮಗಳು ಅನೇಕ ಮಂದಿಗಳನ್ನು ಆಕರ್ಷಿಸುತ್ತಿವೆ. ವೇದಾಂತದಲ್ಲಿ ಕೂಡ ಜನರ ಆಸಕ್ತಿ ಬೆಳೆಯುತ್ತಿದೆ.

ನೈಸರ್ಗಿಕ ವಿಕೋಪಗಳಾದಾಗ ಈ ಎಲ್ಲ ಕೇಂದ್ರಗಳು ಆಹಾರ, ಹಾಗೂ ಇತರ ವಸ್ತುಗಳ ವಿತರಣೆ ಮುಂತಾದ ಸೇವಾ ಕಾರ್ಯಗಳಲ್ಲಿ ತೊಡಗುತ್ತಿವೆ. ಸಾವೊ ಪೌಲೋ ಕೇಂದ್ರದಲ್ಲಿ ಉತ್ತಮವಾದ ರೀತಿಯಲ್ಲಿ ಅಗತ್ಯವಿದ್ದ ಜನರಿಗೆ ಸಹಾಯ ಮಾಡುವ ವ್ಯವಸ್ಥೆಯಿದೆ. ಈ ಕಾರ್ಯಕ್ರಮಗಳು ಇಲ್ಲಿ ನಿಯತವಾಗಿ ನಡೆಯುತ್ತಿವೆ. ಕ್ರಿಸ್‌ಮಸ್‌ಗೆ ಮುನ್ನ ಬಡವರಿಗೆ ಆಟಿಕೆ, ಸಿಹಿತಿಂಡಿ ಹಾಗೂ ಇನ್ನಿತರ ವಸ್ತುಗಳನ್ನು ಉಡುಗೊರೆಯಾಗಿ ನೀಡಲಾಗುತ್ತಿದೆ. ಈ ಮೂಲಕ ಅವಕಾಶ ವಂಚಿತರು ಹಾಗೂ ಬಡಜನರು ಹಬ್ಬವನ್ನು ಚೆನ್ನಾಗಿ ಆಚರಿಸಲು ಸಾಧ್ಯವಾಗುವುದು.

ಈ ಎಲ್ಲ ಕೇಂದ್ರಗಳಲ್ಲಿ ಭಕ್ತರಿಗಾಗಿ ಗ್ರಂಥಾಲಯಗಳಿವೆ. ಅದೇ ರೀತಿ ರಾಮಕೃಷ್ಣ-ವಿವೇಕಾನಂದ-ವೇದಾಂತ ಸಾಹಿತ್ಯವನ್ನು ವಿತರಿಸಲು ಪುಸ್ತಕ ಮಳಿಗೆಗಳೂ ಇವೆ. ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ, ಸ್ವಾಮಿ ವಿವೇಕಾನಂದರ ಜಯಂತಿಗಳು, ಕ್ರಿಸ್‌ಮಸ್ ಈವ್, ದುರ್ಗಾಪೂಜೆ, ಕಲ್ಪತರು ದಿನಾಚರಣೆ, ರಾಮನವಮಿ, ಶ್ರೀಕೃಷ್ಣ ಜನ್ಮಾಷ್ಟಮಿ, ಬುದ್ಧ ಜಯಂತಿ ಇತ್ಯಾದಿಗಳನ್ನು ಈ ಕೇಂದ್ರಗಳಲ್ಲಿ ಆಚರಿಸಲಾಗುತ್ತಿದೆ. ಸಾವೊ ಪೌಲೋ ಕೇಂದ್ರದಲ್ಲಿ ಆಧ್ಯಾತ್ಮಿಕ ಶಿಬಿರಗಳನ್ನು ನಡೆಸಲಾಗುತ್ತಿದೆ; ಅದು ಬ್ರೆಝಿಲ್ ದೇಶದ ಎಲ್ಲ ಕಡೆಗಳಿಂದ ಭಕ್ತರನ್ನು ಆಕರ್ಷಿಸುತ್ತಿದೆ. ಸಾವೊ ಪೌಲೋ ಹಾಗೂ ರಿಯೊ ಡಿ ಜನೇರೋ ಕೇಂದ್ರಗಳಲ್ಲಿ ಸತತವಾಗಿ ಯೋಗ ತರಗತಿಗಳನ್ನು ನಡೆಸಲಾಗುತ್ತಿದೆ. ಸಾವೋ ಪೌಲೋ ಕೇಂದ್ರದಲ್ಲಿ ಇತ್ತೀಚೆಗೆ ಆಯುರ್ವೇದ ಶಿಬಿರವನ್ನೂ ಏರ್ಪಡಿಸಲಾಗಿತ್ತು.

ಸ್ವಾಮಿ ಪರಾತ್ಪರಾನಂದರು ಮಿತಭಾಷಿ; ರಾಮಕೃಷ್ಣ-ವಿವೇಕಾನಂದರ ಅನೇಕ ಮೂಲ ಗ್ರಂಥಗಳನ್ನು ಸ್ಪಾನಿಷ್ ಭಾಷೆಗೆ ಅನುವಾದಿಸಿದ್ದಾರೆ. ಇದು ಅಲ್ಲಿ ವೇದಾಂತ ಭಾವಧಾರೆ ಹರಡಲು ಇನ್ನಷ್ಟು ಶಕ್ತಿ ನೀಡಿತು. ಈಗ ಹತ್ತಕ್ಕೂ ಹೆಚ್ಚಿನ ಪುಸ್ತಕಗಳು ಪೋರ್ಚುಗೀಸ್ ಭಾಷೆಗೆ ಅನುವಾದಗೊಂಡಿದೆ; ಈ ಕಾರ್ಯ ಇನ್ನಷ್ಟು ನಡೆಯುತ್ತಿದೆ. ಕ್ರಮೇಣ ಹೆಚ್ಚು ಹೆಚ್ಚು ಜನರಿಗೆ ಮೂಲ ಸಾಹಿತ್ಯದ ಪರಿಚಯವಾಗುತ್ತಿದೆ, ಇದರಿಂದಾಗಿ ಭಾವಧಾರೆ ಇನ್ನಷ್ಟು ವೇಗವಾಗಿ ಸಾಗುವ ಸಾಧ್ಯತೆಯಿದೆ. ಒಟ್ಟಿನಲ್ಲಿ, ದಕ್ಷಿಣ ಅಮೆರಿಕಾದಲ್ಲಿ ವೇದಾಂತ ಪ್ರಚಾರವೂ ಚೆನ್ನಾಗಿ ನಡೆಯುತ್ತಿದೆ; ಹೆಚ್ಚು ಜನರು ವೇದಾಂತ, ಯೋಗ ಹಾಗೂ ಆಧ್ಯಾತ್ಮಿಕ ಮಾರ್ಗದರ್ಶನವನ್ನು ಅರಸಿ ಬರುತ್ತಿದ್ದಾರೆ.

ಭಾರತದ ಇತರ ಧಾರ್ಮಿಕ ಸಂಘಸಂಸ್ಥೆಗಳು ಕೂಡ ಈ ದೇಶಗಳಲ್ಲಿ ಹಲವು ಶಾಖೆಗಳನ್ನು ಹೊಂದಿವೆ. ಸಾಯಿಬಾಬಾ, ಇಸ್ಕಾನ್, ಗೌಡೀಯ ವೈಷ್ಣವ ಮಠ, ಮಾತಾ ಅಮೃತಾನಂದಮಯಿ ಆಶ್ರಮ, ಯೋಗದಾ ಸತ್ಸಂಗ ಸೊಸೈಟಿ, ಬ್ರಹ್ಮ ಕುಮಾರಿ ಇತ್ಯಾದಿ. ಜನಪ್ರಿಯ ಆಧ್ಯಾತ್ಮಿಕ ಮುಖಂಡರಾದ ಶ್ರೀ ಶ್ರೀ ರವಿಶಂಕರ್, ಮಾತಾ ಅಮೃತಾನಂದಮಯಿ ಹಾಗೂ ಇನ್ನಿತರರು ಇಲ್ಲಿನ ನಗರಗಳಿಗೆ ಆಗಾಗ ಭೇಟಿ ಕೊಡುತ್ತಾರೆ. ಈ ದೇಶಗಳ ಜನರ ನಡುವೆ ವಿವಿಧ ರೀತಿಯ ಯೋಗಗಳು ಅತ್ಯಂತ ಜನಪ್ರಿಯವಾಗಿವೆ. ಪಾರ್ಕ್, ಬೀಚ್, ಮುಕ್ತ ಸ್ಥಳಗಳಲ್ಲಿ ಹಲವು ಮಂದಿ ಒಟ್ಟಾಗಿ ಆಸನಗಳನ್ನು ಹಾಕುವುದನ್ನು ಎಲ್ಲೆಡೆ ನೋಡಬಹುದು! ತಂತ್ರ ಹಾಗೂ ಇನ್ನಿತರ ವಿಚಿತ್ರ ಅಭ್ಯಾಸಗಳನ್ನು ಮಾಡುವವರೂ ಇಲ್ಲಿದ್ದಾರೆ; ಇವುಗಳನ್ನು ಬೋಧಿಸುವ ಅನೇಕ ಗುರುಗಳು ಅದನ್ನೇ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ! ಪೌರ್ವಾತ್ಯ ದೇಶದ ಯಾವುದೇ ಸಂಗತಿಯಾದರೂ ಸರಿ, ಅದರ ಬಗ್ಗೆ ಏನೋ ಒಂದು ಬಗೆಯ ಆಕರ್ಷಣೆ, ಕುತೂಹಲ ಇಲ್ಲಿ ಕಂಡುಬರುತ್ತದೆ. ಆದರೂ ನಿಜವಾದ ಧರ್ಮ, ಆಧ್ಯಾತ್ಮಿಕತೆಯತ್ತ ಒಲವು ಕೂಡ ಒಳಪ್ರವಾಹದಂತೆ ಗೋಚರವಾಗುತ್ತದೆ. ವೇದಾಂತದ ಅಲೆಗಳು ಇಷ್ಟು ದೂರದ ತೀರಕ್ಕೆ ಅಲೆಗಳಾಗಿ ಹೇಗೆ ಬಂದು ವ್ಯಾಪಿಸುವುದು; ಅದರ ಪರಿಣಾಮವಾಗಿ ಅರಿವಿನ ಹಾಗೂ ಸಮನ್ವಯದ ಸಂಗೀತ ಈ ಪ್ರದೇಶಗಳಲ್ಲಿ ಹೇಗೆ ಮೈದೋರುವುದು ಎಂದು ಕಾಲವೇ ಹೇಳಬೇಕು. ಪ್ರಾತಃಕಾಲದ ಇಬ್ಬನಿಯಂತೆ ಶ್ರೀರಾಮಕೃಷ್ಣರು ಕಾರ್ಯವೆಸಗುತ್ತಾರೆ. ಇನ್ನೂ ಮುಚ್ಚಿರುವ ಮೊಗ್ಗುಗಳನ್ನು ನಿಧಾನವಾಗಿ ಅರಳಿಸಿ, ಶಾಂತಿಯ ಅರಿವಿನ ಸೌರಭವನ್ನು ಎಲ್ಲೆಡೆ ಹರಡುತ್ತಾರೆ. ಈ ಭವ್ಯ ಭಾವಧಾರೆಯಲ್ಲಿ ಕೈಜೋಡಿಸಿದವರೇ ಧನ್ಯರು – ಏಕೆಂದರೆ, ಅವರು ದಿವ್ಯತೆಯ ಪ್ರಕಾಶದ, ಅನಂತ ಆನಂದದ ಪವಿತ್ರ ಜಲದಲ್ಲಿ ಮಿಂದೇಳುತ್ತಾರೆ.

*(ಅನುವಾದ: ಸಂಪಾದಕರದು)*